ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 10th September 1969

The House met in the Assembly Chamber, Vidhana Soudha, Bangalore, at One of the Clock.

MR. SPEAKER (SRI S. D. KOTHAVALE) in the Chair.

STARRED QUESTIONS

(to which oral answers were given)

Officers from old and new Mysore Areas working in the State

57. Sri MAHADEV G. BANAKAR (Byadgi).—

Will the Chief Minister be pleased to state :—

(*a*) the number of Officers working in the State who are of the status of :

(1) Heads of Departments ;

and

(2) Deputy Commissioners as on 1st January, 1969

(*b*) of them how many are from old Mysore and how many are from New Mysore area ?

Sri VEERENDRA PATIL (Chief Minister).—

(*a*) (1) Heads of Departments ... 70

(2) Deputy Commissioners ... 19

(*b*) (1) Heads of Departments :—

Old Mysore ... 43

New Mysore ... 24

(SRI EEPENDRA PATIL)

The remaining 3 are from areas outside the New Mysore.

(2) Deputy Commissioners :—

Old Mysore	...	11
New Mysore	...	4

The remaining 4 are from areas outside the New Mysore.

ಶ್ರೀ ಮಹದೇವ ಜಿ. ಬಣಕಾರ್.—ಸ್ವಾಮಿ, ಈ ರಾಜ್ಯದಲ್ಲಿರತಕ್ಕಂಥ ಒಟ್ಟು 70 ಜನ ಮುಖ್ಯಾಧಿಕಾರಿಗಳಲ್ಲಿ ಹಳೆಯ ಮೈಸೂರಿನವರು 43 ಜನ, ಹೊಸ ಮೈಸೂರಿನವರು 24 ಜನ ಇದ್ದಾರೆ ಎಂದು ಹೇಳಿದ್ದೀರಿ. ಒಟ್ಟು 19 ಜನ ಜಿಲ್ಲಾಧಿಕಾರಿಗಳಲ್ಲಿ 4 ಜನ ಮಾತ್ರ ಹೊಸ ಮೈಸೂರಿನವರು ಎಂದು ಉತ್ತರ ಕೊಟ್ಟಿದ್ದೀರಿ. ತಾವು ಮುಖ್ಯಮಂತ್ರಿಗಳಾದ ಮೇಲೆ ಹಳೇ ಮೈಸೂರಿನ ಜನರನ್ನು ತುಳಿತಿದ್ದೀರಿ, ಹೊಸ ಮೈಸೂರಿನ ಜನರಿಗೆ ತಮಗೆ ಬೇಕಾದವರಿಗೆ ಬಡ್ತಿ ಕೊಟ್ಟು ಮುಖ್ಯಾಧಿಕಾರಿಗಳನ್ನಾಗಿ ನೇಮಿಸಿದ್ದೀರಿ ಎಂದು ವಾರ ಪತ್ರಿಕೆಗಳಲ್ಲಿ ಪ್ರಚಾರ ಆಗುತ್ತಾ ಇದೆ. ಇದರ ಬಗ್ಗೆ ತಮ್ಮ ಅಭಿಪ್ರಾಯ ಏನು ?

† ಶ್ರೀ ವೀರೇಂದ್ರ ಪಾಟೀಲ್.—ಅದಕ್ಕಾಗಿಯೇ ನಿನ್ನೆ ದಿವಸ ಒಂದು ಸ್ಟೇಟ್‌ಮೆಂಟನ್ನು ಮಾನ್ಯ ಸಭೆಯ ಮುಂದೆ ಇಟ್ಟಿದ್ದೇನೆ. ಆ ಸ್ಟೇಟ್‌ಮೆಂಟ್ ಎಲ್ಲಾ ಮಾನ್ಯ ಸದಸ್ಯರ ಕೈಗೆ ಸೇರಿದೆಯೆಂದು ನಾನು ತಿಳಿದುಕೊಂಡಿದ್ದೇನೆ ; ಮತ್ತು ಪತ್ರಿಕೆಗಳಲ್ಲೂ ಬಂದಿದೆ. ಇದಾದ ಮೇಲೆ ಪರಿಸ್ಥಿತಿ ಏನು ಇದೆಯೆಂದು ಎಲ್ಲರಿಗೂ ಗೊತ್ತಾಗಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಮಹದೇವ ಜಿ. ಬಣಕಾರ್.—ತಮ್ಮ ಹೇಳಿಕೆ ಪ್ರಕಾರ ಹೊಸ ಮೈಸೂರು ಭಾಗದ ಅಧಿಕಾರ ವರ್ಗಕ್ಕೆ ಹಳೆ ಮೈಸೂರು ಅಧಿಕಾರ ವರ್ಗಕ್ಕಿಂತಲೂ ತಾರತಮ್ಯ ಇದೆ ಎಂದು ನನ್ನ ಅಭಿಪ್ರಾಯ ಇದೆ. ಆದುದರಿಂದ ಇದನ್ನು ಸರಿಮಾಡುವುದಕ್ಕೆ ಏನು ಹೊಸ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೀರಿ ?

ಶ್ರೀ ವೀರೇಂದ್ರ ಪಾಟೀಲ್.—ಇದರಲ್ಲಿ ಏನಾಗುತ್ತದೆ ಎಂದರೆ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್ ಆಗಿ ಬರಬೇಕಾದರೆ ಸೀನಿಯಾರಿಟಿ ಮೇಲೆ ಬರುತ್ತಾರೆ. ಆದಕ್ಕಾಗಿ ಪ್ರತಿಯೊಂದು ಏರಿಯಾಕ್ಕೂ ರಿಸರ್ವೇಷನ್ ಇಡುವುದಕ್ಕಾಗುವುದಿಲ್ಲ. ಡೆಪ್ಯೂಟಿ ಕಮೀಷನರ್ ಆಗಬೇಕಾದರೆ ಐ. ಎ. ಎಸ್. ಆಗಬೇಕು. ಡೆಪ್ಯೂಟಿ ಕಮೀಷನರ್ ಆಗುವುದಕ್ಕೆ ಸಾಧ್ಯ ಇಲ್ಲ. ಇವರನ್ನು ಆರಿಸತಕ್ಕಂಥ ಜವಾಬ್ದಾರಿ ಕೇಂದ್ರ ಸರ್ಕಾರದವರದ್ದು. ಐ. ಎ. ಎಸ್. ಆಫೀಸರ್ ಆಗಿ ಸೆಲಕ್ಟ್ ಮಾಡುವುದಕ್ಕೆ ಇಂತಿಂತಹ ಅರ್ಹತೆಗಳು ಇರಬೇಕು ಎಂದು ಇರುತ್ತದೆ. ಆದುದರಿಂದ ಈ ರೀತಿ ಐ. ಎ. ಎಸ್. ಆಫೀಸರುಗಳನ್ನು ಸೆಲೆಕ್ಟ್ ಮಾಡುವಾಗ ಇಂತಿಂಥ ಏರಿಯಾಕ್ಕೆ ಇಷ್ಟಿಷ್ಟೇ ಕೊಡಿರಿ, ನಮ್ಮ ಸ್ಟೇಟ್‌ಗೆ ಇಷ್ಟು ಕೊಡಿರಿ ಎಂದು ಹೇಳುವುದಕ್ಕಾಗುವುದಿಲ್ಲ. ಆ ರೀತಿ ಆಯ್ಕೆ ಮಾಡುವಾಗ ಕೆಲವು ಕಡೆ ಕಡಿಮೆ ಆಗಬಹುದು, ಕೆಲವು ಕಡೆ ಹೆಚ್ಚು ಆಗಬಹುದು. ಇದು ನಮ್ಮ ಕೈಯಲ್ಲಿಲ್ಲ.

ಶ್ರೀ ಎಂ. ಹೆಚ್. ಜಯಪ್ರಕಾಶ ನಾರಾಯಣ್.—ಅರ್ಹರಾಗಿದ್ದಂಥ ಹರಿಜನರು ಇದ್ದರೂ ಕೂಡ ಹೆಚ್ಚು ಸಂಖ್ಯೆಯಲ್ಲಿ ಹೆಡ್ ಆಫ್ ದಿ ಡಿಪಾರ್ಟ್‌ಮೆಂಟ್‌ನವರಾಗಲಿ, ಸೆಕ್ರೆಟರಿಯವರಾಗಲಿ, ಡೆಪ್ಯೂಟಿ ಕಮೀಷನರ್ ಆಗಲಿ ಆಗಿಲ್ಲದೆ ಇರುವುದಕ್ಕೆ ಕಾರಣ ಏನು ತಿಳಿಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಐ. ಎ. ಎಸ್. ಅಧಿಕಾರಿಗಳಾಗಿಲ್ಲದೆ ಹೋದರೆ ಅಂಥವರನ್ನು ಡೆಪ್ಯುಟಿ ಕಮಿಷನರಾಗಿ ಮಾಡುವುದಕ್ಕಾಗುವುದಿಲ್ಲ. ಐ. ಎ. ಎಸ್. ಅಧಿಕಾರಿಗಳು ಯಾರಿರುತ್ತಾರೆ ಅವರಲ್ಲಿ ನೋಡಿ ಡೆಪ್ಯುಟಿ ಕಮಿಷನರಾಗಿ ಮಾಡಬೇಕಾಗುತ್ತದೆ. ಕೆಲವು ಷೆಡ್ಯೂರ್ಡ್ ಕ್ಯಾಸ್ಟ್ ಮತ್ತು ಷೆಡ್ಯೂರ್ಡ್ ಟ್ರೈಬ್ ಜನರು ಐ. ಎ. ಎಸ್. ಅಧಿಕಾರಿಗಳಾಗಿದ್ದಾರೆ. ಸೀನಿಯಾರಿಟಿಯಲ್ಲಿ ಅವರು ಡೆಪ್ಯುಟಿ ಕಮಿಷನರಿಗಿಂತ ಹೆಚ್ಚಾಗಿರುವುದರಿಂದ ಅಂಥವರನ್ನು ಡೆಪ್ಯುಟಿ ಕಮಿಷನರಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮೊನ್ನೆ ಮೊನ್ನೆ ಷೆಡ್ಯೂರ್ಡ್ ಕ್ಯಾಸ್ಟಿಗೆ ಸೇರಿದ ಸೀನಿಯರ್ ಐ. ಎ. ಎಸ್. ಅಧಿಕಾರಿಗಳು ಸೆಕ್ರೆಟರಿಗಳಾಗಿದ್ದರು. ಅವರು ಪಬ್ಲಿಕ್ ಸರ್ವಿಸ್ ಕಮಿಷನ್ನಿಗೆ ಮೆಂಬರಾಗಿ ಹೋಗಿದ್ದಾರೆ. ಪ್ರತಿಯೊಂದು ಸೆಕ್ರೆಟರಿ, ಹೆಡ್ ಆಫ್ ಡಿಪಾರ್ಟ್‌ಮೆಂಟ್, ಡೆಪ್ಯುಟಿ ಕಮಿಷನರ್ ಇವನ್ನೆಲ್ಲ ಒಂದೇ ರೀತಿಯಾಗಿ ಹಂಚಿಕೆ ಮಾಡಿ ರಿಸರ್ವೇಷನ್ ಮಾಡುವುದಕ್ಕಾಗುವುದಿಲ್ಲ.

†Indicates that the remarks or speeches have not been revised by the member concerned.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲಾಖಾ ಮುಖ್ಯಾಧಿಕಾರಿಗಳ ಹುದ್ದೆ ಸೆಲೆಕ್ಷನ್ ಪೋಸ್ಟ್ ಎಂದು ನಾನು ತಿಳಿದಿದ್ದೇನೆ. ಈ 70 ಜನರ ಪೈಕಿ ಜನರನ್ನು ಸೀನಿಯಾರಿಟಿ ಓವರ್‌ಲುಕ್ ಮಾಡಿ ನೇಮಿಸಲಾಗಿದೆ ಎಂದು ಹೇಳುವುದಕ್ಕಾಗುತ್ತದೆಯೆ ?

ಶ್ರೀ ವೀರೇಂದ್ರ ಪಾಟೀಲ್.—ಅದು ಡೀಟೇಲ್ ಪ್ರಶ್ನೆ ಆಗುವುದರಿಂದ ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಬೇಕಾಗುತ್ತದೆ. ಹೆಡ್ಸ್ ಆಫ್ ಡಿಪಾರ್ಟ್‌ಮೆಂಟ್ ಪೋಸ್ಟ್ಸ್, ಸೆಲೆಕ್ಷನ್ ಪೋಸ್ಟ್ ಇಂಥ ಸ್ಥಾನಗಳಿಗೆ ನೇಮಕ ಮಾಡುವಾಗ ಪ್ರಮೋಷನ್ ಕಮಿಟಿಯವರು ಸಂಬಂಧಪಟ್ಟವರ ಕಾನ್‌ಫಿಡೆನ್ಷಿಯಲ್ ರಿಕಾರ್ಡ್ ಮುಂತಾದುವನ್ನು ನೋಡಿಕೊಂಡು ಯಾರು ಸ್ಯೂಟಬಲ್ ಆಗುತ್ತಾರೆ ಎಂದು ನೋಡಿಕೊಂಡು ಸೆಲೆಕ್ಟ್ ಮಾಡುತ್ತಾರೆ. ಸೆಲೆಕ್ಷನ್ ಪೋಸ್ಟ್ ಆದರೂ ಕೂಡ ಸಾಧ್ಯವಾದ ಮಟ್ಟಿಗೂ ಸೀನಿಯಾರಿಟಿಯನ್ನು ಅಲ್ಲಗಳೆಯುವುದಿಲ್ಲ, ಓವರ್‌ಲುಕ್ ಮಾಡುವುದಿಲ್ಲ. ಒಂದು ವೇಳೆ ಅವರ ಕಾನ್‌ಫಿಡೆಷಿಯಲ್ ರೀಪೋರ್ಟ್ ಚೆನ್ನಾಗಿ ಇಲ್ಲವೆ ಹೋದರೆ, ಮತ್ತೆ ಏನಾದರೂ ಇದ್ದರೆ ಅಂಥವರನ್ನು ಸೂಪರ್‌ಸೀಡ್ ಮಾಡುತ್ತೇವೆ. ಸಾಧಾರಣವಾಗಿ ಸೂಪರ್‌ಸೀಡ್ ಮಾಡುವುದಿಲ್ಲ.

Sri H. SIDDAVEERAPPA.—Where can I find the definition for old Mysore and New Mysore and in what Act and Rules they are defined ?

Sri VEERENDRA PATIL.—The hon. Member is putting this question. Personally I do not mean anything. But what some of the hon. Members mean about that I will explain. The old Mysore means, the erstwhile Mysore State and the new Mysore means, the State after 1956.

ಶ್ರೀ ಬೋಳಾ ರಘುರಾಮ ಶೆಟ್ಟಿ.—ಸರ್ಕಾರಿ ಪ್ಲೀಡರನ್ನು ನೇಮಕ ಮಾಡುವಾಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯೋಗ್ಯತೆಯ ಪ್ರಕಾರ ಸೆಲೆಕ್ಟ್ ಮಾಡಿಲ್ಲ ಎನ್ನುವ ಭಾವನೆ ಬಂದಿದೆ. ಅದನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೇಳುವ ಪ್ರಶ್ನೆಗೂ ಸಭೆಯ ಮುಂದೆ ಇರುವ ಪ್ರಶ್ನೆಗೂ ಸಂಬಂಧವಿಲ್ಲ. ಅವರು ಪ್ರತ್ಯೇಕ ಪ್ರಶ್ನೆಯನ್ನು ಕೇಳಿದರೆ ಸಂಬಂಧಪಟ್ಟ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎಸ್. ಭೀಮಣ್ಣ.—ಕರ್ಣಾಟಕ ದೇಶ ಬಂದಾದ ಮೇಲೆ ಹಳೇ ಮೈಸೂರು, ಹೊಸ ಮೈಸೂರು ಎನ್ನುವ ರೀತಿಯಲ್ಲಿ ಉತ್ತರ ಕೊಡುತ್ತ ಬಂದರೆ ಮುಂದೆಯೂ ಕೂಡ ಹಳೇ ಮೈಸೂರು, ಹೊಸ ಮೈಸೂರು, ಈ ಜಾತಿಯವರು, ಆ ಜಾತಿಯವರು ಈ ಭಾಷೆಯವರು ಆ ಭಾಷೆಯವರು ಈ ಪ್ರಕಾರ ವಿವರಗಳನ್ನು ಕೊಡುವುದರ ಬದಲು ಇಂಥ ಪ್ರಶ್ನೆಗಳು ಬಂದಾಗ ಸರ್ಕಾರದವರು ಈ ಪ್ರಕಾರವಾಗಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ ಎಂದು ನಿರ್ದಿಷ್ಟವಾಗಿ ಹೇಳುತ್ತಾರೆಯೇ ? ಸರ್ಕಾರದ ನೀತಿ ಇದರ ಬಗ್ಗೆ ಏನು ?

ಶ್ರೀ ವೀರೇಂದ್ರ ಪಾಟೀಲ್.—ನಾವು ಇದನ್ನು ಪ್ರೋತ್ಸಾಹ ಮಾಡುತ್ತಿಲ್ಲ. ಆದರೆ ಮಾನ್ಯ ಸದಸ್ಯರೆಲ್ಲರು ಇಂಥ ವಿಷಯಗಳನ್ನು ಕೇಳಬಾರದು, ಅಂಥ ವಿಷಯಗಳನ್ನು ಮಾತನಾಡಬಾರದು ಎಂದು ಮನನ ಮಾಡಿಕೊಂಡರೆ ಸರ್ಕಾರಕ್ಕೆ ಅದಕ್ಕಿಂತ ಸಂತೋಷವಾದ ಸಂಗತಿ ಮತ್ತೊಂದಿಲ್ಲ. ಒಂದು ಪ್ರಶ್ನೆ ಅಡ್ಮಿಟ್ ಆಗಿ ನಮ್ಮ ಹತ್ತಿರ ಬಂದಾಗ ಅಧ್ಯಕ್ಷರಿಗೆ ಇಂಥ ಪ್ರಶ್ನೆಗಳನ್ನು ಏಕೆ ಅಡ್ಮಿಟ್ ಮಾಡುತ್ತೀರಿ ಎಂದು ಕೇಳುವ ಅಧಿಕಾರ ಇಲ್ಲ. ಬಂದ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದ ಜವಾಬ್ದಾರಿ ಸರ್ಕಾರಕ್ಕೆ ಇದೆ. ಒಂದು ವೇಳೆ ಮಾನ್ಯ ಸಭೆ ಅಭಿಪ್ರಾಯಪಟ್ಟರೆ ಅಧ್ಯಕ್ಷರು ಇಂಥ ಪ್ರಶ್ನೆಗಳನ್ನು ಅಡ್ಮಿಟ್ ಮಾಡದೆ ಇರಬಹುದು.

ಶ್ರೀ ಸಿದ್ದಯ್ಯ ಕಾಶೀಮಠ.—ಹಳೆ ಮೈಸೂರಿನಲ್ಲಿ ಎಷ್ಟು ಜನರನ್ನು ನೇರವಾಗಿ ಇಲಾಖಾ ಮುಖ್ಯಾಧಿಕಾರಿಗಳಾಗಿ ನೇಮಕಮಾಡಲಾಗಿದೆ ?

ಶ್ರೀ ವೀರೇಂದ್ರ ಪಾಟೀಲ್.—ಆ ತಪಶೀಲನ್ನು ಈ ದಿವಸ ಹೇಳುವುದಕ್ಕಾಗುವುದಿಲ್ಲ. ಕೆಲವರು ಐ. ಎ. ಎಸ್. ಆಫೀಸರುಗಳಿದ್ದಾರೆ. ಅವರು ಡೈರೆಕ್ಟ್‌ವಾಗಿ ನೇಮಿಸಲ್ಪಡುವರು. ಕೆಲವುವೇಳೆ ಪ್ರಮೋಷನ್ ಮೇಲೆ ನೇಮಕಮಾಡಲ್ಪಡುವುದು.

ಶ್ರೀ ಎಚ್. ಬಿ. ಹ್ಯಾಲನಯ್ಯ.—ಸೆಲೆಕ್ಷನ್ ಪೋಸ್ಟು ಮತ್ತು ಪ್ರಮೋಷನ್ ಪೋಸ್ಟುಗಳಿಗೆ ಅರ್ಜಿ ಕರೆಯುವಾಗ ಹೊಸ ಮೈಸೂರಿನವರು ಅಥವ ಹಳೇ ಮೈಸೂರಿನವರು ಎಂದು ತಿಳಿಸಬೇಕೆಂದು ಕೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಹಾಗೆ ಕೇಳುವುದಕ್ಕಾಗುವುದಿಲ್ಲ; ಹೇಳುವುದಕ್ಕೂ ಬರುವುದಿಲ್ಲ ವಿಚಾರ ಮಾಡುವುದಕ್ಕೂ ಬರುವುದಿಲ್ಲ. ಸೆಲೆಕ್‌ಷನ್ ಎಂದು ಹೇಳಿದಾಗ ಒಂದು ವೇಳೆ ಸೆಲೆಕ್‌ಷನ್ ಬೈ ಪ್ರಮೋಷನ್ ಎಂದು ರೂಲ್ಸ್‌ನಲ್ಲಿದ್ದರೆ ಸಂಬಂಧಪಟ್ಟ ಸಮಿತಿಯು ಪರಿಶೀಲಿಸಿ ಯೋಗ್ಯರನ್ನು ಶಿಫಾರ್ಸು ಮಾಡುವುದು, ಅವರನ್ನು ನೇಮಕ ಮಾಡಲಾಗುವುದು.

ಶ್ರೀ ಮಹದೇವ ಜಿ. ಬಣಕಾರ್.—ಹಳೇ ಮೈಸೂರು ಮತ್ತು ಹೊಸ ಮೈಸೂರು ಎಂಬ ವಾದ ಇರಬಾರದು ಎಂಬುದನ್ನು ಒಪ್ಪೋಣ. ಹಳೇ ಮೈಸೂರು ಮತ್ತು ಹೊಸ ಮೈಸೂರು ಎಂಬುದಕ್ಕೆ ಡೆಫೆನಿಷನ್ ಕೊಟ್ಟಿಲ್ಲವೆಂದು ಮಾನ್ಯ ಸಿದ್ದವೀರಪ್ಪನವರು ರಿಮಾರ್ಕ್ ಮಾಡಿದರು. ಎ.ಐ.ಸಿ.ಸಿ. ನಡೆದಾಗ ಹಳೆಯ ಮೈಸೂರಿಗೆ ಅನ್ಯಾಯವಾಗಿದೆ ಎಂದು ಹೇಳಿ ಅಲ್ಲಿ ಹೊಸ ಮೈಸೂರು, ಹಳೇ ಮೈಸೂರು ಎಂಬ ಶಬ್ದಗಳನ್ನು ಉಪಯೋಗಿಸಿದರು. ಮೊದಲನೆಯ ಸಲ ಅಲ್ಲಿ ಈ ಪ್ರಸ್ತಾಪ ಮಾಡಲ್ಪಟ್ಟಿತು. ಹಾಗೆ ಭೇದ ಮಾಡಬಾರದೆಂಬುದೇ ನನ್ನ ಉದ್ದೇಶ. ರಾಷ್ಟ್ರವನ್ನು, ದೇಶವನ್ನು ವಿಭಿನ್ನ ಮಾಡುವ ದುರುದ್ದೇಶ ಅಲ್ಲಿದೆ. ಹಾಗೆ ಮಾಡಬಾರದೆಂಬುದು ನನ್ನ ಉದ್ದೇಶ.

ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸಚಿವರು ಐ.ಎ.ಎಸ್. ಆಫೀಸರುಗಳನ್ನು ನೇಮಿಸುವ ಅಧಿಕಾರ ಕೇಂದ್ರ ಸರಕಾರದ ಕೈಯಲ್ಲಿದೆಯೆಂದು ಹೇಳಿದರು. ಅದಕ್ಕೆ ಅವರು ಹೆಲ್ಪ್‌ಲೆಸ್ ಎಂದು ಹೇಳಿದರು. ಷೆಡ್ಯೂಲ್ಡ್ ಕ್ಯಾಸ್ಟಿನವರಿಗೆ ಯೋಗ್ಯ ರೀತಿಯಿಂದ ಪ್ರಾತಿನಿಧ್ಯ ಕೊಡಬೇಕೆಂಬ ಉದ್ದೇಶವಿದ್ದರೆ ಐ.ಎ.ಎಸ್. ಹುದ್ದೆಗಳಿಗೆ ಶಿಫಾರ್ಸು ಮಾಡುವಾಗ ಒಬ್ಬಿಬ್ಬರು ಷೆಡ್ಯೂಲ್ಡ್ ಕಾಸ್ಟಿನವರಿಗೆ ಆ ಹುದ್ದೆಗಳು ದೊರಯುವಂತೆ ಪ್ರಯತ್ನ ಮಾಡುವಿರಾ?

ಶ್ರೀ ವೀರೇಂದ್ರ ಪಾಟೀಲ್.—ನಮ್ಮ ಸಿಫಾರ್ಸಿನ ಮೇಲೆ ಐ.ಎ.ಎಸ್. ಹುದ್ದೆಗೆ ನೇಮಕ ಮಾಡುವುದಿಲ್ಲ. ಬೈ ಪ್ರಮೋಷನ್ ಕೋಟ ಇರುವುದು, ಆ ಹುದ್ದೆಗಳಿಗೆ ಯಾರನ್ನು ನೇಮಿಸಬೇಕು ಎಂಬುದನ್ನು ತಿಳಿಸಲು ಒಂದು ಸಮಿತಿ ಇದೆ. ಅದಕ್ಕೆ ಯು.ಪಿ.ಎಸ್.ಸಿ. ಮೆಂಬರ್ ಛೇರ್ಮನ್ ಆಗಿದ್ದಾರೆ. ಅದೇ ರೀತಿಯಿಂದ ಆಫೀಸರೂ ಇರುವರು. ಪ್ರತಿ ವರ್ಷ ಪ್ರತಿ ಸ್ಟೇಟಿಗೆ ಬಂದು ಎಲಿಜಬಲ್ ಇರುವವರನ್ನು ಕಾನ್‌ಫಿಡೆನ್‌ಷಿಯಲ್ ರಿಕಾರ್ಡು ಮುಂತಾದುವನ್ನು ನೋಡಿ ಸೆಲೆಕ್ಟ್ ಮಾಡಿ ಒಂದು ಲಸ್ಟ್ ಮಾಡುವರು. ಅದರ ಪ್ರಕಾರ ವೇಕೆನ್ಸಿ ಬಿದ್ದಾಗ ಪ್ರಮೋಷನ್ ಕೋಟ ಪ್ರಕಾರ ಐ.ಎ.ಎಸ್. ಎಂದು ನೋಟಿಫೈ ಮಾಡಲು ಅವರಿಗೆ ಅಧಿಕಾರವಿದೆ. ಇತರರು ಯಾರೂ ಶಿಫಾರ್ಸು ಮಾಡಲು ಅಧಿಕಾರವಿಲ್ಲ.

Misappropriation of money in Mudhol Primary Land Development Bank

134. Sri K. P. NADAGOWDA (Mudhol).—

Will the Minister for Development be pleased to state :—

(*a*) whether it is a fact that an amount of Rs. 16,464-75 has been misappropriated by the Chairman and Secretary of Mudhol Primary Land Development Bank, Bijapur District ;

(*b*) if so, the action the Government has taken in the matter?

Sri P. M. NADGOUDA (Minister for Development).—

(*a*) Yes. A sum of Rs. 16,026·75 is alleged to have been misappropriated by the Secretary.

(*b*) The entire amount has been recovered from the Secretary by resorting to civil action and his services have been terminated.

ಶ್ರೀ ಕೆ. ಪಿ. ನಾಡಗೌಡ.—16 ಸಾವಿರ ಚಿಲ್ಲರೆ ರೂಪಾಯಿಗಳ ಮಿಸ್‌ಅಪ್ರೊಪ್ರಿಯೇಷನ್ ಆಗಿದೆ ಎಂದು ಉತರದಲ್ಲಿ ಕೊಡಲಾಗಿದೆ. ಅದನ್ನು ಸಿವಿಲ್ ಆಕ್‌ಷನ್‌ನಿಂದ ವಸೂಲು ಮಾಡಲಾಗಿದೆ ಎಂದು ತಿಳಿಸಲಾಗಿದೆ. ಸಿವಿಲ್ ಕೋರ್ಟಿಗೆ ಹೋಗಿದ್ದರೆ, ದಾವಾ ಮಾಡಿದ್ದರೆ ನಂಬರನ್ನು ಹೇಳುತ್ತೀರಾ?